ಕಳುಹಿಸಿ ಅಲ್ಲೇನಾದರೂ ನೀರಿನ ಸಮಸ್ಯೆ ತೀರಾ ಆಗಿತ್ತು ಎಂದರೆ ಅದನ್ನು ಬಗೆಹರಿಸಲಿಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ಅಧ್ಯಕ್ಷರು : ಆಯಿತು ಅದು ಅಲ್ಲಿಗೆ ಮುಗಿಯಿತು.

ಶ್ರೀ ಉಮೇಶ ಏ ಕತ್ತಿ : ನಾನು ಒಂದು ನೋಟೀಸ್ ಕಳುಹಿಸಿದ್ದೇನೆ.

ಅಧ್ಯಕ್ಷರು : ನೀವು ನೋಟಿಸ್ ಕಳುಹಿಸಿಲ್ಲ.

ಶ್ರೀ ಉಮೇಶ ಏ ಕತ್ತಿ : ಶೂನ್ಯ ವೇಳೆ ಅಂತ ಕಳುಹಿಸಲಿಲ್ಲ

MR. SPEAKER : You cannot expect any reply.

ಶ್ರೀ ಎ, ಆರ್, ಕೃಷ್ಣಮೂರ್ತಿ : ಅಧ್ಯಕ್ಷರೇ ನಾನೂ ಕೂಡ ಒಂದು ನೋಟಿಸ್ ಕಳಿಸಿದ್ದೆ

ಅಧ್ಯಕ್ಷರು : ಕತ್ತಿಯವರೇ ನೀವು ಈಗ ನೋಟಿಸ್ ಕಳುಹಿಸುತ್ತಿದ್ದೀರಿ,

ಶ್ರೀ ಉಮೇಶ್ ಏ ಕತ್ತಿ : ನೀರಾವರಿ ಮಂತ್ರಿಗಳು ಇಲ್ಲೇ ಇದ್ದಾರೆ.

12.40 ಪಿಎಂ

MR. SPEAKER : I am very sorry ತಾವು ಈಗ ಕಳುಹಿಸುತ್ತಿದ್ದೀರಿ. ತಕ್ಷಣ ರಿಪ್ಲೈ ಎಲ್ಲಿರುತ್ತದೆ? you must understand the different of the ministers also. ನ್ಯಾಯವಾಗಿ ಅವುರ ಬರೀ ಮೆನ್‌ಷನ್ ಮಾಡಬೇಕು ಅಷ್ಟೆ. ನಮ್ಮ ಕಾನೂನುಪ್ರಕಾರ ಮೆನ್‌ಷನ್ ಮಾಡಬೇಕು. ಮಂತ್ರಿಗಳು ಇಚ್ಛಿಪಟ್ಟರೆ ಉತ್ತರ ಹೇಳಬಹುದು. ಇಲ್ಲದಿದ್ದರೆ ಸುಮ್ಮನೆ ಇರಬಹುದು, ತಕ್ಷಣ ಕಳುಹಿಸಿಬಿಟ್ಟು ಐದು ನಿಮಿಷದಲ್ಲಿ ಉತ್ತರ ಹೇಳಬೇಕೆಂದರೆ ಹೇಗೆ ಹೇಳುವುದಕ್ಕಾಗುತ್ತದೆ? ದಯವಿಟ್ಟು ತಾವು ಕುಳಿತುಕೊಳ್ಳಿ. ನಾಳೆ ನಿಮಗೆ ನಾನು ಆಲೋ ಮಾಡುತ್ತೇನೆ.

2. **ಕೃಷ್ಣನದಿ ನೀರು ಬತ್ತಿ ಹೋಗಿರುವುದರಿಂದ ಉಂಟಾಗಿರುವ ತೊಂದರೆ.**

†**ಶ್ರೀ ಉಮೇಶ್ ಏ.ಕತ್ತಿ (ಹುಕ್ಕೇರಿ)** : ಮಾನ್ಯ ಅಧ್ಯಕ್ಷರೆ, ಕೃಷ್ಣ ನದಿ ನೀರು ಬತ್ತಿ ಹೋಗಿ ಸುಮಾರು ಒಂದು ತಿಂಗಳಾಯಿತು. ಅಲ್ಲಿ ನಾಲ್ಕು ಮುನಿಸಿಪಾಲಿಟಿಗಳು ಬರುತ್ತದೆ. ಅಲ್ಲಿ ಕುಡಿಯಲಿಕ್ಕೆ ನೀರಿಲ್ಲ. ಅದರ ಜೊತೆಗೆ ಮೂರು ಸಕ್ಕರೆ ಫ್ಯಾಕ್ಟರಿಗಳು ನೀರು ಇಲ್ಲದೆ ಬಂದೆ ಆಗುವ ಪ್ರಸಂಗ ಕೂಡ ಇದೆ. ಅಥಣಿ ತಾಲ್ಲೂಕು ಮತ್ತು ರಾಯಬಾಗ್ ತಾಲ್ಲೂಕಿನ ಕಬ್ಬು ಒಣಗಿಹೋಗುವ ಪ್ರಸಂಗ ಕೂಡ ಇದೆ. ಅದರ ಜೊತೆಗೆ ಬಂದಂಥ ಕಬ್ಬನ್ನು ನುರಿಸುವುದಕ್ಕಾಗದೆ ಅರ್ಧದಲ್ಲಿ ಬಂದು ಹೋಗುವ ಪರಿಸ್ಥಿತಿ ಇದೆ. ಆ ದಿಸೆಯಲ್ಲಿ ಮಾನ್ಯ ನೀರಾವರಿ ಮಂತ್ರಿಗಳು ನೀರನ್ನು ಬಿಡುಸುವಂಥ ಕಾರ್ಯಕ್ರಮವನ್ನು ಹಾಕಬೇಕು. ಅಲ್ಲದೆ ಕೃಷ್ಣಾ ನದಿಯಲ್ಲಿರುವ ಮೊಸಳೆಗಳು ಹಳ್ಳಿ ಮಟ್ಟಕ್ಕೂ ಬಂದು ಇವತ್ತು ಹಳ್ಳಿ ಮಟ್ಟದಲ್ಲಿ ಮನೆಗಳನ್ನು ಹೊಕ್ಕುತ್ತಿರುವುದು ಸರ್ಕಾರದ ಗಮನಕ್ಕೆ ಈಗಾಗಲೇ ಬಂದಿದೆ ಮತ್ತು ಸಂಬಂಧಪಟ್ಟ ಅಧಿಕಾರಿಗಳೂ ಕೂಡ ಹೋಗಿ ನೋಡಿಕೊಂಡು ಬಂದಿದ್ದಾರೆ. ಕಳೆದ 50 ವರ್ಷದಲ್ಲಿ ಕೃಷ್ಣಾ ನದಿ ಬತ್ತಿ ಹೋಗುವ ಪ್ರಸಂಗ ಇದುವರೆಗೂ ಬೆಳಗಾಂ ಜಿಲ್ಲೆಗೆ ಬಂದಿರಲಿಲ್ಲ. ಪ್ರಥಮಬಾರಿಗೆ ಇವತ್ತು ಕೃಷ್ಣಾ ನದಿ ಬತ್ತಿಹೋಗಿ ಸುಮಾರು 15 ರಿಂದ 20 ಲಕ್ಷ ಟನ್ ಕಬ್ಬು ಸುರಿಸದೆ ಒಣಗಿಹೋಗುವ ಪ್ರಸಂಗ ಇವತ್ತು ಬಂದಿದೆ. ಅದರ ಜೊತೆಗೆ ಮುಂದಿನ ವರ್ಷ ಬರುವಂಥ ಕಬ್ಬಿಗೂ ಸಹಾ ನೀರಿಲ್ಲದೆ ಒಣಗಿಹೋಗುವ ಪ್ರಸಂಗ ಕೂಡ ಇದೆ. ಚಿಕ್ಕೋಡಿ, ಅಥಣಿ, ಕುಡಚಿ ಮತ್ತು ರಾಯಭಾಗ್

ಇವತ್ತು ನಾಲ್ಕು ಮುನಿಸಿಪಾಲಿಟಿಗಳು ಕುಡಿಯಲಿಕ್ಕೆ ಇದೇ ನದಿ ಮೇಲೆ ಡಿಪೆಡ್ ಅದಂಥ ಮುನಿಸಿಪಾಲಿಟಿಗಳು ಕುಡಿಯಲಿಕ್ಕೆ ನೀರಿಲ್ಲದೆ ಒಂದು ತಿಂಗಳಿಂದ ಪರದಾಡುತ್ತಿದೆ. ಇದರ ಬಗ್ಗೆ ಸರ್ಕಾರ ಕೂಡಲೇ ಮಹಾರಾಷ್ಟ್ರದ ಸರ್ಕಾರದ ಜೊತೆಗೆ ಮಾತನಾಡಿ ನೀರು ಬಿಡಿಸುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮುಖೇನ ನಾನು ನೀರಾವರಿ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ. ಇಲ್ಲದಿದ್ದರೆ ಅಲ್ಲಿ ಚುನಾಯಿತ ಪ್ರತಿನಿಧಿಗಳು, ಧೃತ ಪ್ರತಿನಿಧಿಗಳು, ಸ್ಥಳೀಯ ಶಾಸಕರಾದ ಕಾಗವಾಡ ಶಾಸಕರು ಇವತ್ತು ರಸ್ತೆ ರೋಖೋ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಇದೇ ಪರಿಸ್ಥಿತಿ ಮುಂದುವರೆದರೆ ತಾಲ್ಲೂಕು ಬಂದ್ ಮಾಡುವಂಥ ಪ್ರಸಂಗ ಒದಗಿಬರಬಹುದು. ಆ ದಿಸೆಯಲ್ಲಿ ಸರ್ಕಾರ ಗಂಭೀರವಾಗಿ ಪರಿಗಣಿಸಿ ಕೂಡಲೇ ನೀರನ್ನು ಬಿಡಿಸುವಂಥ ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖೇನ ನಾನು ಮಾನ್ಯ ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ ಅಲ್ಲಿ ಹೋರಾಟ ಆಗಿಲ್ಲವೆಂದು ಹೇಳಿದರು. ಇವತ್ತು ನಾನು ಪತ್ರಿಕಾ ಕಟಿಂಗ್‌ಗಳನ್ನೂ ಕೂಡ ತೆಗೆದುಕೊಂಡು ಬಂದಿದ್ದೇನೆ. ರಸ್ತೆ ರೋಖೊ ಆಗಿವೆ, ಹೋರಾಟ ಆಗಿದೆ, ಅಲ್ಲಿ ಕೊಯ್ನೊ ಅಣೆಕಟ್ಟಿನ ನೀರನ್ನು ಬಿಡದಿದ್ದರೆ ಈಗೇನು ಮಾನ್ಯ ಉಮೇಶ್ ಕತ್ತಿಯವರು ಹೇಳಿದರಲ್ಲ, ಅಲ್ಲಿ ಚಿಕ್ಕೋಡಿ,ಅಥಣಿ ಆ ಎಲ್ಲಾ ತಾಲ್ಲೂಕುಗಳಿಗೂ ಬಹಳ ತೊಂದರೆ ಇದೆ. ಅದಕ್ಕೆ ಅಧಿಕೃತವಾಗಿ ನಾನು ನಿನ್ನೆ ಮಾನ್ಯ ಮುಖ್ಯ ಮಂತ್ರಿಗಳಿಗೆ ವಿನಂತಿ ಮಾಡಿದೆ. ಅಧಿಕೃತವಾಗಿ ನೀವೇ ಹೇಳಿ ಎಂದು. ಇಲ್ಲಿನ ಮಹಾರಾಷ್ಟ್ರದವರು ಎಷ್ಟು ನೀರನ್ನು ಬಿಡುವುದಕ್ಕೆ ತಯಾರಾಗಿದ್ದಾರೆ. ಈ ತನಕ ಬಿಟ್ಟಿದ್ದಾರೋ ಇಲ್ಲವೋ ಎಂದು ತಾವೇ ಹೇಳಬೇಕೆಂದು ನಾನು ನಿನ್ನೆ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದೆ. ಅದಕ್ಕೆ ತಾವು ಮಾನ್ಯ ಹೆಚ್ .ಕೆ. ಪಾಟೀಲರು ಇಲ್ಲೇ ಇದ್ದೀರಿ. ಇದರ ಬಗ್ಗೆ ನೀವೇನು ಮಾತುಕತೆ ಮಾಡಿದ್ದೀರಿ. ಅವರೇನು ಒಪ್ಪಿಕೊಂಡಿದ್ದಾರೆ, ಎಷ್ಟು ನೀರನ್ನು ಬಿಡಲಿಕ್ಕೆ ಒಪ್ಪಿಕೊಂಡಿದ್ದಾರೆ, ಯಾವತ್ತಿನಿಂದ ನೀರನ್ನು ಬಿಡುತ್ತಿದ್ದಾರೆ,ಇದರ ಬಗ್ಗೆ ದಯವಿಟ್ಟು ಅದನ್ನು ಸದನದ ಗಮನಕ್ಕೆ ತರಬೇಕೆನ್ನುವಂಥದ್ದು ಎಂದು ಹೇಳಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ಕೆ. ಪಾಟೀಲ್ (ಭಾರೀ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಹಿರಿಯ ಸದಸ್ಯರಾದ ಸನ್ಮಾನ್ಯ ಕತ್ತಿಯವರು ಕೃಷ್ಣಾ ನದಿ ಬತ್ತಿರತಕ್ಕಂಥದ್ದರ ಬಗ್ಗೆ ಹಾಗೂ ಮಹಾರಾಷ್ಟ್ರದಿಂದ ನೀರು ಬಿಡುಗಡೆ ಮಾಡಿಸುವಂಥ ನಮ್ಮ ಸರ್ಕಾರದ ಪ್ರಯತ್ನಗಳ ಬಗ್ಗೆ ವಿವರ ತಿಳಿಯುವಂಥದ್ದರ ಬಗ್ಗೆ ಪ್ರಸ್ತಾಪಮಾಡಿದ್ದಾರೆ, ಸನ್ಮಾನ್ಯ ಕತ್ತಿಯವರು ಹೇಳಿದಹಾಗೆ ಕೃಷ್ಣಾ ನದಿ ಬತ್ತಿ ಹೋಗಿತ್ತು. ಕಾರಣ ನೀರು ಸಂಗ್ರಹಣೆ ಮಾಡಿಕೊಳ್ಳತಕ್ಕ ಏನು ಡ್ಯಾಮ್‌ಗಳಿವೆ, ಬ್ಯಾರೇಜುಗಳಿವೆ, ಅವುಗಳಲ್ಲಿ ನೀರು ಸಂಗ್ರಹಣೆ ಇದೆ ಎನ್ನುವುದು ತಮಗೆ ಗೊತ್ತಿರುವಂಥ ವಿಚಾರವೇ ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಗಳು ಮಹಾರಾಷ್ಟ್ರದ ಹಿಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ದೇಶಮುಖ್‌ರವರಿಗೆ ಪತ್ರ ಬರೆದಿದ್ದರು, ಹಾಗೂ ಫೋನ್‌ನಲ್ಲೂ ಆ ವಿಚಾರವಾಗಿ ಅವರಿಗೆ ವಿನಂತಿ ಮಾಡಿದ್ದರು. ನಂತರ ನೂತನವಾಗಿ ಬಂದಿರತಕ್ಕ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಾಗಿರತಕ್ಕ ಸನ್ಮಾನ್ಯ ಶಿಂಧೆ ಫೋನ್ ಮುಖಾಂತರವೂ ಮಾತನಾಡಿದರು. ಹಾಗೂ ಎರಡು ಪತ್ರಗಳನ್ನು ಸಹಿತ ಕಳುಹಿಸಿದ್ದರು, ಅವರು ಅದನ್ನು ಸಹಾನುಭೂತಿಯಿಂದ ನೋಡುತ್ತೇವೆ. ಬೇಗ ಬಿಡುಗಡೆ ಮಾಡುವುದಕ್ಕೆ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿ ನಮಗೆ ಭರವಸೆಯನ್ನೂ ಸಹಿತ ಕೊಟ್ಟಿದ್ದರು. ಇತನ್ಮಧ್ಯೆ ನಾವು ಭೀಮಾ ನದಿಗೆ

ನೀರು ಬಿಡಬೇಕಾಗಿರತಕ್ಕಂಥದ್ದು, ಎಷ್ಟು ಬಿಟ್ಟಿರಿ, ಏನು, ಆ ಎಲ್ಲಾ ವಿವರಗಳನ್ನೂ ಸಹಿತ ಅವರು ಕೇಳುತ್ತಿದ್ದರು. ಆದರೆ, ತಮ್ಮೆಲ್ಲರಿಗೆ ಗೊತ್ತಿದೆ, ಕಳೆದ ಎರಡು ವರ್ಷದ ಹಿಂದೆ ಸನ್ಮಾನ್ಯ ಮುಖ್ಯಮಂತ್ರಿಗಳು ದೂದ್‌ಗಂಗಾ ವಿಚಾರವಾಗಿ ಒಂದು ಒಡಂಬಡಿಕೆಯನ್ನು ಒಪ್ಪಂದವನ್ನು ಮಹಾರಾಷ್ಟ್ರ ಸರ್ಕಾರದ ಜೊತೆಗೆ ಮಾಡಿಕೊಂಡು ನಾಲ್ಕು ಟಿಎಂಸಿ ನೀರನ್ನು ನಾವು ಪಡೆದುಕೊಳ್ಳತಕ್ಕಂಥ ನಮ್ಮ ಹಕ್ಕೇನು ಬಚಾವತ್ ಆಯೋಗದಲ್ಲಿ ತೀರ್ಪಿನಲ್ಲಿತ್ತೋ ಅದರ ಪ್ರಕಾರ ನಾಲ್ಕು ಟಿಎಂಸಿ ನಮಗೆ ಬರಬೇಕು ಹಾಗೆ ಎಂದು ಹೇಳಿ ನಮ್ಮ ಹಕ್ಕು ಸ್ಥಾಪನೆ ಮಾಡಿದೆವು. ಆ ಸಂದರ್ಭದಲ್ಲಿ 33 ಕೋಟಿ ರೂಪಾಯಿ ಹಣವನ್ನು ನಾವು ಮಹಾರಾಷ್ಟ್ರಕ್ಕೆ ಸಂದಾಯ ಮಾಡಬೇಕಾಗಿರತಕ್ಕ ಪ್ರಸಂಗ ಇತ್ತು. ಆ 33 ಕೋಟಿ ರೂಪಾಯಿಗಳನ್ನು ಸಹಿತ ನಾವು ಸಂದಾಯ ಮಾಡದ್ದೇವೆ, ಆ ಹಿನ್ನಲೆಯೊಳಗೆ ನಮಗೇನು ನಾಲ್ಕು ಟಿಎಂಸಿ ನೀರು ದೂದ್‌ಗಂಗಾ ಪ್ರಾಜೆಕ್ಟ್‌ನಲ್ಲಿ ಕಳಂಬಾಡಿಯಲ್ಲಿ ಲಭ್ಯ ಇರಬೇಕು. ಆ ಒಂದು ಪ್ರಮಾಣದ ನೀರು ಈ ಸಲ ನಮಗೆ ಲಭ್ಯ ಆಗಲಿಲ್ಲ, 4 ಟಿಎಂಸಿ ಇರಬೇಕು, ಆದರೆ ಈ ಸಲ ಅದು ನೀರು ಎಷ್ಟು ಪ್ರಮಾಣದಲ್ಲಿ ಬಂತು, ಅದನ್ನು ನೋಡಿಕೊಂಡು 3.4 ಟಿಎಂಸಿ ನಮ್ಮ ಪಾಲಿಗೆ ಬರಬೇಕಾದುದು ಹಾಗೆ ಎಂದು ಹೇಳಿ ಹಿಂದಿನ ಸಭೆಯಲ್ಲಿ ನಿರ್ಣಯಿಸಿದ್ದೆವು, ಅದರಲ್ಲಿ 0.06 ಟಿಎಂಸಿ ನೀರನ್ನು ಈಗಾಗಲೇ ದೂದ್‌ಗಂಗಾ ಪ್ರಾಜೆಕ್ಟ್‌ನಿಂದ ಕಳಂಬಾಡಿಯಿಂದ ನಮ್ಮ ಕರ್ನಾಟಕಕ್ಕೆ ಬಿಡುಗಡೆಯಾಗಿತ್ತು. ಈಗ ಇರುವ ಪರಿಸ್ಥಿತಿಯನ್ನು ಗಮನದಲ್ಲಿರಿಸಿ ಅಲ್ಲಿ ಕುಡಿಯುವ ನೀರಿಗೆ ಆಗಿರುವ ತಾಪತ್ರಯ ಹಾಗೂ ಅಲ್ಲಲ್ಲಿ ಷುಗರ್ ಫ್ಯಾಕ್ಟರೀಸ್ ಸಹಿತ ಕ್ಲೋಸ್ ಆಗಿವೆ ಎನ್ನುವ ಬಗ್ಗೆ ಸಹಿತ ನಮ್ಮ ಗಮನಕ್ಕೆ ಬಂದಿತ್ತು. ಬೇರೆ ಬೇರೆ ಗ್ರಾಮಾಂತರ ಭಾಗದಲ್ಲಿ ಜನರೂ ಸಹಿತ ತೊಂದರೆ ಪಡುತ್ತಿದ್ದಾರೆ, ಆ ಬೆಳೆ ಪರಿಸ್ಥಿತಿ ಎಲ್ಲವನ್ನೂ ಗಮನಿಸಿ ನಿಮ್ಮ ಜಿಲ್ಲೆಯ ಶಾಸಕರುಗಳೆಲ್ಲರೂ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿಯಾಗಿದ್ದರು. ನನ್ನನ್ನೂ ಭೇಟಿಯಾಗಿದ್ದರು, ನಿಮ್ಮ ಪಕ್ಷದ ಶಾಸಕರಾಗಿರತಕ್ಕ ಸನ್ಮಾನ್ಯ ರಾಜು ಕಾಗೆಯವರೂ ಸಹಿತ ನನ್ನನ್ನು ಭೇಟಿಯಾಗಿದ್ದರು, ಸನ್ಮಾನ್ಯ ಡೊಂಗರಗಾಂವ್‌ರವರು ಸನ್ಮಾನ್ಯ ರಾಜು ಕಾಗೆಯವರು ಬಂದಾಗ ನಾವು ಮತ್ತೆ ಅವರಿಗೆ ವಿಶೇಷವಾಗಿರುವಂಥ ಮನವಿಯನ್ನು ಮಾಡಿದೆವು. ಅಷ್ಟೇ ಅಲ್ಲ, ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ರವಿವಾರವಾದರೂ ಪರವಾಗಿಲ್ಲ, ನಮ್ಮಲ್ಲಿರುವ ಸಮಸ್ಯೆ ಹಿನ್ನೆಲೆಯಾಳಗಡೆ ಎಮರ್ಜೆನ್ಸಿ ಮಿಾಟಿಂಗನ್ನು ಮಾಡಬೇಕೆಂದು ಹೇಳಿ ಈ ದೂದ್‌ಗಂಗಾ ಪ್ರಾಜೆಕ್ಟ್‌ನ ಸ್ಟೀರಿಂಗ್ ಕಮಿಟಿ ಸಭೆಯನ್ನು ಮಾಡಿ ಆ ಸಂದರ್ಭದಲ್ಲಿ ಬಹುಶಃ ಸನ್ಮಾನ್ಯ ಡೊಂಗರಗಾಂವ್‌ರವರು ಹಾಗೂ ರಾಜು ಕಾಗೆಯವರೂ ಸಹಿತ ಅಲ್ಲಿಗೆ ಹೋಗಿದ್ದರು ಎಂದು ಕಾಣುತ್ತದೆ. ಈಗಾಗಲೇ ಮಹಾರಾಷ್ಟ್ರ ಸರ್ಕಾರದವರು 1.5 ಟಿಎಂಸಿ ನೀರನ್ನು ಬಿಡುಗಡೆ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ, ನಿನ್ನೆ ಮುಂಜಾನೆಯಿಂದ ನೀರು ಬಿಡುಗಡೆ ಪ್ರಾರಂಭವಾಗಿದೆ, ನಿನ್ನೆ ಸಾಯಂಕಾಲ ನಮ್ಮ ನೀರಾವರಿ ಕಾರ್ಯದರ್ಶಿಗಳು ನನ್ನನ್ನು ಭೇಟಿಯಾಗಿ ಸಾಯಂಕಾಲ4-00-4-30ಗಂಟೆಗೆ ಒಂದು ಸಾವಿರ ಕ್ಯೂಸೆಕ್ಸ್ ನೀರು ಕಳಂಬಾಡಿಯಿಂದ ಹರಿಯುತ್ತಿದೆ, ಅದನ್ನು ಎರಡು ಸಾವಿರ ಕ್ಯೂಸೆಕ್ಸ್‌ರವರೆಗೆ ಅವರು ತಲುಪುತ್ತಾರೆ. 1.5 ಟಿಎಂಸಿ ನೀರನ್ನು ನಮ್ಮ ಕರ್ನಾಟಕಕ್ಕೆ ಹರಿಸುವುದಾಗಿ ಈಗಾಗಲೇ ಅವರು ಭರವಸೆ ಕೊಟ್ಟು ಕಾರ್ಯಪ್ರವೃತ್ತರಾಗಿದ್ದಾರೆ, ಕೃಷ್ಣಾ ನದಿಯಲ್ಲಿ ಈ ಪ್ರಮಾಣದ ನೀರು ಹರಿದುಬರುತ್ತದೆ. ಇದರಿಂದ ಸಮಸ್ಯೆ ಸಾಕಷ್ಟು ಹತೋಟಿಗೆ ಬರುತ್ತದೆ. ಸಾಕಷ್ಟು ಕಡಿಮೆಯಾಗುತ್ತದೆ. ಸನ್ಮಾನ್ಯ ಕತ್ತಿಯವರು ಹೇಳಿದರು. ಮಾನ್ಯ ರಾಜು ಕಾಗೆಯವರು ಕಾಣುತ್ತಿಲ್ಲ,

ರಾಜು ಅವರು ಡೊಂಗರಗಾಂವ್ ಎದುರಿಗೆ ಥ್ಯಾಂಕ್ಸ್ ಎಂದು ಹೇಳಿಕಳುಹಿಸಿದ್ದಾರೆ, ನೀವು ಅವರಿಗೆ ಏನು ಒತ್ತಾಯ ಮಾಡಿದರೋ ಏನೋ, ಅಲ್ಲಿ ಅವರು ಧರಣ ಮಾಡುತ್ತಿರಬೇಕು, ಈಗ ಸಧ್ಯ ಈ ಸಂದರ್ಭದಲ್ಲಿ ಈ ಪ್ರಮಾಣದ ನೀರು ಬಂದಿರುವುದರಿಂದ ಸ್ವಲ್ಪಮಟ್ಟಿನ ಸಮಾಧಾನ ಆ ಭಾಗದ ಜನರಿಗೆ, ರೈತರಿಗೆ ಕುಡಿಯುವ ನೀರಿಗಾಗಿ ಆಗಿದೆ ಎಂದು ಹೇಳಿ ನಾನು ಭಾವಿಸುತ್ತೇನೆ.

MR. SPEAKER: No discussion please, That is why I am not allowing,

ಶ್ರೀ ಉಮೇಶ್ ವಿ ಕತ್ತಿ : ನಾಲ್ಕು ಮುನಿಸಿಪಾಲಿಟಿಗಳು ಕುಡಿಯುವ ನೀರಿಲ್ಲದೆ ತೊಂದರೆಗೆ ಸಿಕ್ಕಿಕೊಂಡಿವೆ, 1.5 ಟಿಎಂಸಿ ನೀರು ಸಾಕಾಗುವುದಿಲ್ಲ. ಇದು ಇನ್ನೂ ಫೆಬ್ರವರಿ.

MR. SPRAKER: No discussion..

ಶ್ರೀ ಹೆಚ್. ಕೆ. ಪಾಟೀಲ್ : ಮಾನ್ಯ ಕತ್ತಿಯವರೇ, 1.5 ಟಿಎಂಸಿ ನೀರು ಅದು ಹರಿದು ಬರುತ್ತಿರುತ್ತದೆ, ಆಮೇಲೆ ಅದೇನೂ ಮುಗಿಯುವುದಿಲ್ಲ.

ಅಧ್ಯಕ್ಷರು: ಮಾನ್ಯ ಕೃಷ್ಣಮೂರ್ತಿಯವರೇ, ನಾಳೆಗೆ ನಿಮ್ಮದನ್ನು ತೆಗೆದುಕೊಳ್ಳುತ್ತೇನೆ, ಇವತ್ತು ಆಗುವುದಿಲ್ಲ.

ಶ್ರೀ ಉಮೇಶ್ ವಿ ಕತ್ತಿ : ಮಾನ್ಯ ಹೆಚ್.ಕೆ.ಪಾಟೀಲರು ಕೃಷ್ಣಾ ನದಿಯನ್ನು ನೋಡಿದ್ದಾರೆ, ಒಂದು ಸಾವಿರ ಕ್ಯೂಸೆಕ್ಸ್ ನೀರನ್ನು ಬಿಟ್ಟರೆ ಒಂದು ಕಿಲೋ ಮಿಟರ್ ಸಹಿತ ಕೃಷ್ಣಾ ನದಿಯಲ್ಲಿ ನೀರು ನಿಲ್ಲುವುದಿಲ್ಲ, ಆ ದೃಷ್ಟಿಯಿಂದ ಕೊಡಲೇ ನಿಮ್ಮದೇ ಪಕ್ಷದ ಸರ್ಕಾರ ಮಹಾ ರಾಷ್ಟ್ರದಲ್ಲಿರುವುದರಿಂದ 5 ಟಿಎಂಸಿ ನೀರನ್ನು ಬಿಡುವ ವ್ಯವಸ್ಥೆಯನ್ನು ಒಮ್ಮೆ ಮಾಡಿದ್ದಾದರೆ ಬಹಳ ಒಳ್ಳೆಯದು, ಕೊಯ್ನದಲ್ಲಿ ನೀರು ಇದೆ.

ಶ್ರೀ ಹೆಚ್.ಕೆ. ಪಾಟೀಲ್: 5 ಟಿಎಂಸಿ ನೀರು ಬಿಟ್ಟರೆ ಅದು ಆಲಮಟ್ಟಿಗೆ ಬಂದು ನಿಲ್ಲುತ್ತದೆ, ನಿಮಗೇನು ಉಪಯೋಗವಾಯಿತು ಅದರಿಂದ.

ಶ್ರೀ ಉಮೇಶ್ ವಿ.ಕತ್ತಿ : ಮಾನ್ಯ ಅಧ್ಯಕ್ಷರೇ, ನಾಲ್ಕು ಮುನಿಸಿಪಾಲಿಟಿಗಳಿಗೆ ಕುಡಿಯುವ ನೀರಿಲ್ಲ, ಇದ್ದಂಥ ಕಬ್ಬನ್ನು ನುರಿಸಲಾರದ ಪರಿಸ್ಥಿತಿ ಇದೆ. ಕೂಡಲೇ ನೀರಾವರಿ ಮಂತ್ರಿಗಳು ಇನ್ನಷ್ಟು ನೀರನ್ನು ಬಿಡುಗಡೆ ಮಾಡಿಸಬೇಕೆಂದು ತಮ್ಮ ಮುಖಾಂತರ ನಾನು ಒತ್ತಾಯ ಮಾಡುತ್ತೇನೆ.

SRI A.R. KRISHNAMURTHY: Sir.....

MR. SPEAKER: I will allow You tomorrow, Now

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣೆ ಪ್ರಸ್ತಾವ.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ತಾವು ಕೋಪ ಮಾಡಿಕೊಳ್ಳಬೇಡಿ.

ಅಧ್ಯಕ್ಷರು : ಕೋಪ ಅಲ್ಲ ನಾಳೆ ಅಲೋ ಮಾಡುತ್ತೇನೆಂದು ಹೇಳಿದರೂ ಈ ರೀತಿ ಮಾಡಿದರೆ ಹೇಗೆ?

ಶ್ರೀ ಪಿ. ಜಿ. ಆರ್. ಸಿಂಧ್ಯಾ : ನಾಳೇನೆ ಮಾಡಿ. ಅವರದು ಏನಾಗಿದೆ ಎಂದರೆ ಜಿಲ್ಲಾಧಿಕಾರಿಗಳ ಕಛೇರಿಗೆ ರೈತರೆಲ್ಲಾ ಹೋಗಿ ಬೀಗ ಹಾಕಿದ್ದಾರೆ, ಚಾಮರಾಜನಗರ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು ಕಛೇರಿಗೆ ಬೀಗ ಹಾಕಿರುವುದರಿಂದ ಆ ವಿಚಾರವನ್ನು ನಾನು ಪ್ರಸ್ತಾಪಮಾಡಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ ಎಂದು ಅವರು ಹೇಳಿರುವುದು.

ಅಧ್ಯಕ್ಷರು : ನೋ ಡಿಸ್ಕಷನ್. ಪ್ರಸ್ತಾಪ ಮಾತ್ರ ಮಾಡಿ. ನೋ ಡಿಸ್ಕಷನ್.

3. ಚಾಮರಾಜನಗರ ಜಿಲ್ಲೆಯಾದ್ಯಂತ ರೈತರು ಎದುರಿಸುತ್ತಿರುವ ವಿದ್ಯುತ್ ಮತ್ತು ಕುಡಿಯುವ ನೀರಿನ ಸಮಸ್ಯೆ ಬಗ್ಗೆ.

ಶ್ರೀ ಎ.ಆರ್. ಕೃಷ್ಣಮೂರ್ತಿ : (ಸಂತೇಮರನಹಳ್ಳಿ) : ಮಾನ್ಯ ಅಧ್ಯಕ್ಷರೆ, ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಿನ್ನೆ ದಿವಸ ಕೂಡ ನಮ್ಮ ಚಾಮರಾಜನಗರ ಜಿಲ್ಲಾಕೇಂದ್ರ ಸ್ಥಾನದಲ್ಲಿ ಜಿಲ್ಲೆಯಾದ್ಯಂತ ರೈತರು ಈ ವಿದ್ಯುತ್ತಿನ ಸಮಸ್ಯೆ ಮತ್ತು ಕುಡಿಯುವ ನೀರಿನ ಸಮಸ್ಯೆ ವಿಚಾರಕ್ಕೆ ಸಂಬಂಧಿಸಿದಂತೆ, ಈ ಬರ್ದ ಹಿನ್ನಲೆಯಲ್ಲಿ ಯಾವುದೇ ತರಹದ ಸಮಸ್ಯೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಬಗೆಹರಿಸಿಲ್ಲ ಎಂದು ಹೇಳಿ ನಮ್ಮ ಜಿಲ್ಲೆಯ ರೈತರು ನಿನ್ನೆ ದಿವಸ 11 ಗಂಟೆಯಿಂದ ಚಾಮರಾಜನಗರ ಜಿಲ್ಲಾ ಅಧಿಕಾರಿಗಳ ಕಛೇರಿಯಲ್ಲಿ ಅನಿರ್ದಿಷ್ಟವಾಗಿ ಮುಷ್ಕರ ಹೂಡಿದ್ದಾರೆ, ತಾವು ಬೆಳ್ಳಿಗೆ ಚರ್ಚೆ ಮಾಡಿದಂತೆ ಅಲ್ಲಿ ಪಾತ್ರೆಗಳು ಕೂಡ ಬಂದಿವೆ ಅವರುಗಳು ಅಲ್ಲೇ ಠಿಕಾಣಿ ಹೂಡಿ ಅಡಿಗೆ ಕೂಡ ಮಾಡಿರುವಂತಹ ಸನ್ನಿವೇಶ ಆಗಿದೆ. ಹಾಗಾಗಿ ಈ ವಿಚಾರದಲ್ಲಿ ಘನ ಸರ್ಕಾರ ಬಹಳ ಗಂಭೀರವಾಗಿ ಚಿಂತನೆಯನ್ನು ಮಾಡಬೇಕು. ಇವತ್ತು ನಮ್ಮ ಭಾಗಕ್ಕೆ ಸರ್ಕಾರ ಏನು ಕಾನೂನಿನ ಅನ್ವಯ ವಿದ್ಯುತ್ತನ್ನು ಕನಿಷ್ಟ ಪ್ರಮಾಣದಲ್ಲಿ ಸರಬರಾಜು ಮಾಡುತ್ತೇವೆಂದು ಹೇಳಿದ್ದಾರೆ, ಆ ಕನಿಷ್ಟ ವಿದ್ಯುತ್ತನ್ನು ಕೂಡ ಸರಬರಾಜು ಮಾಡುತ್ತಿಲ್ಲ. ನಮ್ಮ 220 ಕೆವಿಗೆ 0.5 ಕೆವಿ ಇರಬಹುದು. ಆ ಟೆಕ್ನಿಕಲ್ ಪಾಯಿಂಟ್ ನನಗೆ ಬರುತ್ತಿಲ್ಲ. ಅಷ್ಟನ್ನು ಮಾತ್ರ ಸರಬರಾಜು ಮಾಡುತಿದ್ದಾರೆ. ಕನಿಷ್ಟ ಗ್ರಾಮಾಂತರದಲ್ಲಿರತಕ್ಕ ಕುಡಿಯುವ ನೀರಿಗೆ ಕೂಡ ಇವತ್ತು ತೊಂದರೆ ಇದೆ. ಜನರಿಗೆ ಇರಬಹುದು ಅಥವಾ ಜಾನುವಾರಿಗೆ ಇರಬಹುದು. ಸಮಸ್ಯೆ ಇವತ್ತು ಉದ್ಭವ ಆಗಿದೆ, ಇವತ್ತು ವಿದ್ಯುತ್ತಿನ ಸಮಸ್ಯೆ ಕಾಡುತ್ತಿರುವುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಬಹಳ ಗಂಭೀರವಾಗಿ ಸಂಬಂಧಪಟ್ಟವರ ಜೊತೆಯಲ್ಲಿ ಸಮಲೋಚನೆ ಮಾಡಿ ಈ ಒಂದು ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳಿ ನಾನು ತಮ್ಮ ಮುಖಾಂತರ ಅವರಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

5. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣಾ ಪ್ರಸ್ತಾಪ

†ಶ್ರೀ ಎಸ್.ಪಿ. ಮುದ್ದಹನುಮೇಗೌಡ(ಕುಣಿಗಲ್): ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

2003 ಫೆಬ್ರವರಿ 27ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರುಗಳನ್ನು ಉದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ಸದಸ್ಯರುಗಳಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ.

ಶ್ರೀ ಎಸ್. ಜಿ. ನಂಜಯ್ಯನಮಠ (ಗುಳೇದಗುಡ್ಡ): ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾವವನ್ನು ಅನುಮೋದಿಸುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 176ನೇ ಅನುಚ್ಛೇದದ ಅಡಿ ಇವತ್ತು ಗೌರವಾನ್ವಿತ ರಾಜ್ಯಪಾಲರು ಜಂಟಿ ಸದನವನ್ನು ಉದ್ದೇಶಿಸಿ ನಮ್ಮೆಲ್ಲರಿಗೂ ಕೂಡ ತಮ್ಮ ವಿಚಾರಪೂರ್ವವಾದಂತಹ ಒಂದು ಭಾಷಣವನ್ನು ಈ ಸದನದ ಮುಂದೆ ಮಂಡಿಸಿದ್ದಾರೆ, ನಮ್ಮ ನಿಯಮಾವಳಿ 20 ರಮೂಲಕ ನಾವೆಲ್ಲರೂ ಕೂಡ ಏನು ಗೌರವಾನ್ವಿತ ರಾಜ್ಯಪಾಲರು ಅನೇಕ ವಿಚಾರಗಳನ್ನು ತಮ್ಮ ಭಾಷಣದ ಮೂಲಕ ಈ ಸಭೆಗೆ ಮಂಡಿಸಿದ್ದಾರೆ, ಅವರಿಗೆ ನಮ್ಮ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಅರ್ಪಿಸತಕ್ಕದ್ದು